# ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

## ದಿನಾಂಕ 28–03–2011 ರಂದು 04.00 ಗಂಟೆಗೆ ಪ್ರಾಧಿಕಾರದ ಮಾನ್ಯ ಅಧ್ಯಕ್ಷರ ಸೂಚನೆಯಂತೆ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯ ನಡುವಳಿಗಳು

* * * * *

**ವಿಷಯ ಸಂಖ್ಯೆ 01** ತುಮಕೂರು ನಗರದ ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿರುವ ವಿಸ್ತೀರ್ಣ 9 ಎಕರೆ ಪ್ರದೇಶಕ್ಕೆ ವಸತಿ ವಿನ್ಯಾಸಕ್ಕೆ ಅನುಮೋದನೆ ಸಂಬಂಧ ಅರ್ಜಿದಾರರು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿ ಹಾಗೂ ಸರ್ಕಾರದ ಪತ್ರ ಸಂಖ್ಯೆ ನಅಇ / 01 / ಬೆಂರೂಪ್ರಾ / 2011 ದಿನಾಂಕ 17–03–2011 ಮತ್ತು ಸಂಖ್ಯೆ ಪತ್ರ ದಿನಾಂಕ 23–03–2011 ರ ಬಗ್ಗೆ

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರದ ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿರುವ 9 ಎಕರೆ ಭೂ ಪ್ರದೇಶಕ್ಕೆ ಸಂಬಂಧಿಸಿದಂತೆ ವಸತಿ ವಿನ್ಯಾಸ ಅನುಮೋದನೆ ಮಾಡಿಕೊಡುವಂತೆ ಮೆ॥ ಮಂಜುನಾಥ ಪ್ಯಾಕೇಜಿಂಗ್ ಪ್ರೈ.ಲಿ., ರವರು ದಿನಾಂಕ 21–02–2011 ರಂದು ಅರ್ಜಿ ಸಲ್ಲಿಸಿದ ಸಂಬಂಧ ದಿನಾಂಕ 11–03–2011 ರಂದು ಮಾನ್ಯ ಅಧ್ಯಕ್ಷರ ಸೂಚನೆಯಂತೆ ವಿಶೇಷ ಸಭೆಯನ್ನು ಕರೆಯಲಾಗಿತ್ತು. ಸದರಿ ಸಭೆಯಲ್ಲಿ ಈ ಕೆಳಕಂಡಂತೆ ಬಹುಮತದ ತೀರ್ಮಾನವನ್ನು ಕೈಗೊಳ್ಳಲಾಗಿತ್ತು.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಭೂಸ್ವಾಧೀನ ಪ್ರಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳು ತೆಗೆದುಕೊಂಡಿರುವ ಕ್ರಮಗಳು, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಕಾನೂನು ಸಲಹೆಗಾರರು ನೀಡಿರುವ ಅಭಿಪ್ರಾಯವನ್ನು ಸಭೆಯು ಕೂಲಂಕುಷವಾಗಿ ಚರ್ಚಿಸಿ, ಉದ್ದೇಶಿತ ಭೂ ಪ್ರದೇಶಕ್ಕೆ ಮಾನ್ಯ ಉಚ್ಚನ್ಯಾಯಾಲಯದ ಆದೇಶದನ್ವಯ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಗೊಂಡಿದ್ದು, ಭೂಸ್ವಾಧೀನ ಕಾಯ್ದೆ 1894 ಪ್ರಕರಣ 4(1) ರ ಮೇರೆಗೆ ಘೋಷಣೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿರುವ ಹಿನ್ನೆಲೆಯಲ್ಲಿ ವಸತಿ ವಿನ್ಯಾಸ ಅನುಮೋದನೆಗೆ ಅವಕಾಶವಿಲ್ಲದ ಕಾರಣ ವಿವರವಾದ ವರದಿಯನ್ನು ಸರ್ಕಾರದ ಗಮನಕ್ಕೆ ತಂದು, ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಈ ವಿಷಯದೊಂದಿಗೆ ಮನವಿ ಸಲ್ಲಿಸಲು, ಸರ್ಕಾರವನ್ನು ಕೋರಲು ಮತ್ತು ಮುಂದೆ ನ್ಯಾಯಾಲಯ / ಸರ್ಕಾರ ನೀಡುವ ಆದೇಶದಂತೆ ಸಭೆಯು ಕ್ರಮವಹಿಸಬಹುದೆಂದು ಸಭೆಯು ಬಹುಮತದಿಂದ ತೀರ್ಮಾನಿಸಲಾಯಿತು.

ಮೆ॥ ಮಂಜುನಾಥ ಪ್ಯಾಕೇಜಿಂಗ್ ಪ್ರೈ.ಲಿ., ರವರು ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ ದಿನಾಂಕ 30–09–2010 ಹಾಗೂ 12–01–2011 ರ ಆದೇಶಗಳನ್ವಯ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಗೊಂಡು ಪೂರ್ಣಗೊಂಡಿಲ್ಲವಾದ

ಕಾರಣ ದಿನಾಂಕ 30-09-2010 ರ ಮಾನ್ಯ ನ್ಯಾಯಾಲಯದ ಆದೇಶದನ್ವಯ ವಸತಿ ವಿನ್ಯಾಸವನ್ನು ಅನುಮೋದನೆ ಮಾಡಲಿಲ್ಲವೆಂದು ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣವು ದಿನಾಂಕ 15-03-2011 ರಂದು ಸ್ವೀಕೃತವಾಗಿದ್ದು, ದಿನಾಂಕ 30-03-2011 ರಂದು ವಿಚಾರಣೆಗೆ ಬರಲಿದೆ.

ಕರ್ನಾಟಕ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಲಾಗಿರುವ ಈ ನ್ಯಾಯಾಂಗ ನಿಂದನಾ ಅರ್ಜಿ ಹಿನ್ನೆಲೆಯಲ್ಲಿ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ ನಅಇ / 01 / ಬೆಂರೂಪ್ರಾ / 2011 ದಿನಾಂಕ 17-03-2011 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಕ್ರಮವಹಿಸಲು ಸೂಚಿಸಿರುತ್ತಾರೆ. ತದ ನಂತರ ದಿನಾಂಕ 23-01-2011 ರ ಪತ್ರದಲ್ಲಿ ಈ ಕೆಳಕಂಡಂತೆ ನಿರ್ದೇಶನ ನೀಡಿರುತ್ತಾರೆ.

ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 30-09-2010 ರಂದು ಹಾಗೂ 12-01-2011 ರಂದು ನೀಡಿರುವ ಆದೇಶಗಳ ಮೇರೆಗೆ Time Frame ದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸದೇ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡದಿರುವ ಕಾರಣ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ನ್ಯಾಯಾಲಯ ನಿಂದನೆ ಪ್ರಕರಣ ಸಿಸಿಸಿ (ಸಿವಿಲ್) ಸಂಖ್ಯೆ 282/2011 ದಾಖಲಾಗಿದ್ದು, ದಿನಾಂಕ 30-03-2011 ರೊಳಗಾಗಿ ಮಾನ್ಯ ನ್ಯಾಯಾಲಯದ ಮುಂದೆ ಮೇಲಿನ ಆದೇಶಗಳನ್ನು ಪಾಲನೆ ಮಾಡುವ ಸಂಬಂಧದಲ್ಲಿ ಅಫಿಡವಿಟ್ ಸಲ್ಲಿಸಬೇಕಾಗಿರುವುದರಿಂದ ಅಷ್ಟರೊಳಗಾಗಿ ಪ್ರಸ್ತಾಪಿಸಲ್ಪಟ್ಟ ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿನ 9 ಎಕರೆ ಜಮೀನನ್ನು ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ 30-09-2010 ರ ಆದೇಶದಲ್ಲಿ 03 ತಿಂಗಳು ಅವಧಿಯೊಳಗೆ ಭೂ ಸ್ವಾಧೀನ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸದಿದ್ದಲ್ಲಿ the respondents are hereby directed to permit the Petitioner to form a layout of residential sites in accordance with law ಎಂದು ನಿರ್ದೇಶಿಸಿರುವುದರಿಂದ ಮಾನ್ಯ ನ್ಯಾಯಾಲಯದ ಆದೇಶ ಪಾಲನೆ ಮಾಡಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1897 ರ ನಿಯಮ 65 ರಂತೆ ನಿರ್ದೇಶನ ನೀಡಿ ವಿನ್ಯಾಸ ಅನುಮೋದನೆ ಮಾಡಲು ತುರ್ತಾಗಿ ನಿಯಮಗಳಂತೆ ಮುಂದಿನ ಅಗತ್ಯ ಕ್ರಮ ಜರುಗಿಸುವಂತೆ ಸೂಚಿಸಿರುತ್ತಾರೆ.

ಕರ್ನಾಟಕ ಮಾನ್ಯ ಉಚ್ಚನ್ಯಾಯಾಲಯದ ತೀರ್ಪು ಹಾಗೂ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರು ದಿನಾಂಕ 23-03-2011 ರಲ್ಲಿ ನೀಡಿರುವ ನಿರ್ದೇಶನದಂತೆ ತುಮಕೂರು ನಗರದ ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿನ 9 ಎಕರೆ ಜಮೀನಿಗೆ ವಸತಿ ವಿನ್ಯಾಸವನ್ನು ಅನುಮೋದಿಸಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ವಿಷಯವನ್ನು ಪ್ರಾಧಿಕಾರದ ವಿಶೇಷ ಸಭೆಯ ಮುಂದೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ**

ಕರ್ನಾಟಕ ಮಾನ್ಯ ಉಚ್ಛನ್ಯಾಯಾಲಯದ ತೀರ್ಪು ಹಾಗೂ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರು ದಿನಾಂಕ 23-03-2011 ರಲ್ಲಿ ನೀಡಿರುವ ನಿರ್ದೇಶನದಂತೆ ತುಮಕೂರು ನಗರದ ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿನ 9 ಎಕರೆ ಜಮೀನಿಗೆ ವಸತಿ ವಿನ್ಯಾಸವನ್ನು ಅನುಮೋದಿಸಬೇಕಾಗಿರುತ್ತದೆ.

**ತೀರ್ಮಾನ**

ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಅಧ್ಯಕ್ಷರು ಸಭೆಗೆ ಈ ಸಂಬಂಧದ ಎಲ್ಲಾ ಮಾಹಿತಿಗಳನ್ನು ನೀಡಿದರು. ನಂತರ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರದವರು ಮೆ॥ ಮಂಜುನಾಥ ಪ್ಯಾಕೇಜಿಂಗ್ ಪ್ರೈ.ಲಿ., ರವರು ಕರ್ನಾಟಕ ಮಾನ್ಯ ಉಚ್ಛನ್ಯಾಯಾಲಯದ ಆದೇಶ ದಿನಾಂಕ 30-09-2010 ಮತ್ತು 12-01-2011 ರ ಆದೇಶಗಳನ್ವಯ ಭೂಸ್ವಾಧೀನ ಪ್ರಕ್ರಿಯೆಯು ಪೂರ್ಣಗೊಂಡಿಲ್ಲವಾದ ಕಾರಣ, ಮಾನ್ಯ ಉಚ್ಛನ್ಯಾಯಾಲಯದ ದಿನಾಂಕ 30-09-2010 ಆದೇಶದನ್ವಯ ವಸತಿ ವಿನ್ಯಾಸವನ್ನು ಅನುಮೋದನೆ ಮಾಡಿಲ್ಲವೆಂದು ಮಾನ್ಯ ಉಚ್ಛನ್ಯಾಯಾಲಯದಲ್ಲಿ ನ್ಯಾಯಾಂಗ ನಿಂದನಾ ಅರ್ಜಿ ಸಲ್ಲಿಸಿರುತ್ತಾರೆ. ಈ ಪ್ರಕರಣವು ದಿನಾಂಕ 30-03-2011 ರಂದು ವಿಚಾರಣೆಗೆ ಬರಲಿದೆ. ದಿನಾಂಕ 11-03-2011 ರಂದು ನಡೆದ ಪ್ರಾಧಿಕಾರದ ವಿಶೇಷ ಸಭೆಯ ನಂತರ ಅಂದರೆ ದಿನಾಂಕ 15-03-2011 ರಂದು ನ್ಯಾಯಾಂಗ ನಿಂದನಾ ಅರ್ಜಿ ಸ್ವೀಕೃತಗೊಂಡಿರುತ್ತದೆ. ಈ ಸಂಬಂಧ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರು ಪತ್ರ ಸಂಖ್ಯೆ ನಅಇ/01/ಬೆಂರೂಪ್ರಾ/2011 ದಿನಾಂಕ 23-03-2011 ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ನಿಯಮ 65 ರನ್ವಯ ನಿರ್ದೇಶವನ್ನು ನೀಡಿ, ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ 30-09-2010 ರಲ್ಲಿ ನೀಡಿರುವ ಆದೇಶವನ್ನು ಪಾಲನೆ ಮಾಡಲು ಸೂಚಿಸಿರುತ್ತಾರೆ. (ಸದರಿ ಪತ್ರದ ಪ್ರತಿಯನ್ನು ನೀಡಲಾಗಿದೆ) ಆದುದರಿಂದ ಮಾನ್ಯ ಉಚ್ಛ ನ್ಯಾಯಾಲಯದ ದಿನಾಂಕ 30-09-2010 ರ ತೀರ್ಪಿನಂತೆ ಮತ್ತು ಸರ್ಕಾರದ ನಿರ್ದೇಶನದಂತೆ ಸದರಿ ಭೂ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಮಾಡಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಇಲ್ಲವಾದಲ್ಲಿ ನ್ಯಾಯಾಂಗ ನಿಂದನೆ ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ನಿಯಮ 65 ರ ಉಲ್ಲಂಘನೆಯಾಗುತ್ತದೆ ಎಂಬುದಾಗಿ ಸಭೆಗೆ ಮಾಹಿತಿಯನ್ನು ನೀಡಿ, ಉಪ್ಪಾರಹಳ್ಳಿ ಗ್ರಾಮದ ಸರ್ವೆ ನಂಬರ್ 23/1ಎ ರಲ್ಲಿನ 9 ಎಕರೆ ಜಮೀನಿಗೆ ವಸತಿ ವಿನ್ಯಾಸವನ್ನು ಅನುಮೋದಿಬೇಕಿರುತ್ತದೆ ಎಂಬುದಾಗಿ ತಿಳಿಸಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಪ್ರಾಧಿಕಾರದ ಸದಸ್ಯರಾದ ಶ್ರೀ ರವಿಶಂಕರ್ ರವರು ಈ ಜಮೀನಿಗೆ ಸಂಬಂಧಿಸಿದಂತೆ ಬೇರೆ ಯಾವುದಾದರು ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇವೆಯೇ? ಎಂಬುದಾಗಿ ಪ್ರಶ್ನಿಸಿದಾಗ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಪ್ರಕರಣದ ವಿವರವನ್ನು ಸಭೆಯಲ್ಲಿ ಮಂಡಿಸಲಾಯಿತು. ಸದರಿ ಸಾರ್ವಜನಿಕ ಅರ್ಜಿ ಸಂಖ್ಯೆ 8367/2010 ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 18-03-2010 ರಲ್ಲಿ Pending consideration of the interim prayer, no third party rights must be created upon the property in question ಎಂಬುದಾಗಿ ಆದೇಶಿಸಿರುತ್ತದೆ ಎಂಬುದನ್ನು ಸಭೆಯ ಗಮನಕ್ಕೆ ತರಲಾಯಿತು. ಇದರ ಬಗ್ಗೆ ಮಾಹಿತಿ ಪಡೆದ ನಂತರ ಮುಂದುವರೆದು ಈಗಾಗಲೇ ಪ್ರಸ್ತಾವಿತ ಭೂ ಪ್ರದೇಶಕ್ಕೆ ಕರ್ನಾಟಕ ಭೂಸ್ವಾಧೀನ ಕಾಯ್ದೆ 1894 ಪ್ರಕರಣ 4(1) ರಂತೆ ಭೂಸ್ವಾಧೀನ ಪ್ರಕ್ರಿಯೆಯ ಘೋಷಣೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿದ್ದು, ಸದರಿ ಪ್ರಕಟಣೆಯನ್ನು ಸಕ್ಷಮ ಪ್ರಾಧಿಕಾರವು ಹಿಂಪಡೆಯದ ಕಾರಣ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪ್ರಸ್ತಾವಿತ ಪ್ರದೇಶಕ್ಕೆ ವಸತಿ ಉದ್ದೇಶಕ್ಕೆ ವಿನ್ಯಾಸ ಅನುಮೋದನೆಯನ್ನು ನಿಯಮಗಳಂತೆ ಅನುಮೋದನೆ ಮಾಡಲು ಅವಕಾಶವಿರುವುದಿಲ್ಲವೆಂದು ತಿಳಿಸಿದರು. ಈ ಸಂದರ್ಭದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ತೀರ್ಪನ್ನು ಉಲ್ಲೇಖಿಸಿ, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 30-09-2010 ರ ಆದೇಶದಲ್ಲಿ ನಿಯಮಗಳಂತೆ ವಿನ್ಯಾಸ ಅನುಮೋದನೆ ಮಾಡಲು ತಿಳಿಸಿದ್ದು, ಮೇಲ್ಕಂಡ ಕಾನೂನಿನ ತೊಡಕುಗಳನ್ನು ಮಾನ್ಯ ಉಚ್ಚ ನ್ಯಾಯಾಲಯದ ಆದ್ಯ ಗಮನಕ್ಕೆ ತರಲು ಹಾಗೂ ಈ ಪ್ರಸ್ತಾವಿತ ಪ್ರದೇಶವು ಸಾರ್ವಜನಿಕ ಉದ್ದೇಶಕ್ಕೆ ಅತ್ಯಾವಶ್ಯಕವಾಗಿ ಬೇಕಾಗಿರುವುದರಿಂದ ಈ ಬಗ್ಗೆ ವಿಷಯವನ್ನು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ಆದ್ಯ ಗಮನಕ್ಕೆ ತರಬಹುದೆಂದು ತಮ್ಮ ಅಭಿಪ್ರಾಯವನ್ನು ಸಭೆಯಲ್ಲಿ ವ್ಯಕ್ತಪಡಿಸಿದರು.

ಇದೇ ರೀತಿ ಸಭೆಯಲ್ಲಿ ಉಪಸ್ಥಿತರಿದ್ದ ಮತ್ತೊಬ್ಬ ಪ್ರಾಧಿಕಾರದ ಸದಸ್ಯರಾದ ಶ್ರೀ ರವಿ ರವರು ಭೂಸ್ವಾಧೀನ ಪ್ರಕಟಣೆ ಶಾಸನಬದ್ದ ಪ್ರಕಟಣೆಯಾಗಿದ್ದು, ಭೂಸ್ವಾಧೀನದಂತಹ ಶಾಸನಬದ್ದ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ನಿಯಮಗಳಂತೆ ಕನಿಷ್ಠ ಕಾಲಾವಕಾಶದ ಅಗತ್ಯವಿರುತ್ತದೆ. ಈ ಬಗ್ಗೆ ದಿನಾಂಕ 11-03-2011 ರಂದು ನಡೆದ ವಿಶೇಷ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿದೆ ಎಂದು ತಿಳಿಸುತ್ತಾ, ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯವು Special Leave Petition ಪ್ರಕರಣ ಸಂಖ್ಯೆ 8939/10 ಮತ್ತು 10993/10 ರ ಆದೇಶ ದಿನಾಂಕ 07-03-2011 ರಂದು ತಿಳಿಸಿರುವಂತೆ ತುರ್ತು ಸಂದರ್ಭಗಳಲ್ಲಿಯೂ ಸಹ ನಿಯಮಗಳಂತೆ ಭೂಸ್ವಾಧೀನ ಪ್ರಕ್ರಿಯೆಯ ಯಾವುದೇ ಹಂತಗಳಿಗೆ ವಿನಾಯ್ತಿ ನೀಡಲು ಸಾಧ್ಯವಿಲ್ಲವೆಂದು ತಿಳಿಸಿ, ಸದರಿ ಆದೇಶ ಪ್ರತಿಯನ್ನು ಸಭೆಯಲ್ಲಿ ಮಂಡಿಸಿ ಆದೇಶದ ಕೆಳಕಂಡ ಭಾಗವನ್ನು ಸಭೆಯಲ್ಲಿ ಪ್ರಸ್ತುತಪಡಿಸಿದರು.

For the reasons aforesaid, we hold that the State government was not justified, in the facts of this case, to invoke the emergency provision of Section 17(4) of the Act. The valuable right of the Appellants under Section 5A of the Act cannot flattened and steamrolled on the 'ipsi dixit' of the executive authority. The impugned notifications under Sections 4 and 6 of the Act in so far as they relate to the Appellants land are quashed. The possession of the Appellants in respect of their land cannot be interfered with except in accordance with law.

ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 07-03-2011 ರಲ್ಲಿ ಆದೇಶಿಸಿರುವಂತೆ ಭೂಸ್ವಾಧೀನ ಪ್ರಕ್ರಿಯೆಗೆ ಅಗತ್ಯವಿರುವ ಕಾಲಾವಕಾಶವನ್ನು ಭೂಸ್ವಾಧೀನಾಧಿಕಾರಿಗಳಿಗೆ ನೀಡಲು ಮಾನ್ಯ ಉಚ್ಚನ್ಯಾಯಾಲಯವನ್ನು ಕೋರಬಹುದೆಂದು ತಮ್ಮ ಅಭಿಪ್ರಾಯವನ್ನು ಸಭೆಯಲ್ಲಿ ವ್ಯಕ್ತಪಡಿಸಿದರು. ಈ ಕಾರಣದಿಂದ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರವು ವಿನ್ಯಾಸ ಅನುಮೋದನೆ ಮಾಡಲು ನ್ಯಾಯಾಂಗ ನಿಂದನೆ ಮಾಡಿದೆ ಎಂಬ ಅರ್ಜಿದಾರರ ಅಭಿಪ್ರಾಯವು ಸಮಂಜಸವಲ್ಲವೆಂದು ಈ ಅಂಶಗಳನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟು ನಿಂದನಾ ಪ್ರಕರಣವನ್ನು ಕೈಬಿಡುವಂತೆ ಕೋರುವಂತೆ ಸಭೆಯಲ್ಲಿ ತಿಳಿಸಿದರು.

ಆಯುಕ್ತರು, ಮಹಾನಗರಪಾಲಿಕೆ, ತುಮಕೂರು ರವರು ಸರ್ಕಾರದ ನಿರ್ದೇಶನದಂತೆ ಕಾನೂನು ನಿಯಮ ಅನುಸರಿಸಿ, ವಿನ್ಯಾಸ ಅನುಮೋದನೆ ನೀಡಬಹುದಾಗಿರುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ಸಭೆಯಲ್ಲಿ ವ್ಯಕ್ತಪಡಿಸಿದರು. ಇದಕ್ಕೆ ಪ್ರಾಧಿಕಾರದ ನಗರ ಯೋಜನಾ ಸದಸ್ಯರು ಸಹಮತವನ್ನು ವ್ಯಕ್ತಪಡಿಸಿದರು.

ಉದ್ದೇಶಿತ ಭೂಪ್ರದೇಶಕ್ಕೆ ವಿನ್ಯಾಸ ಅನುಮೋದನೆ ನೀಡಲು ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ತೀರ್ಪು ಹಾಗೂ ಪ್ರಸ್ತಾವಿತ ಪ್ರದೇಶದ ಭೂಸ್ವಾಧೀನ ಸಂಬಂಧ ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ರವರ ಕಛೇರಿ ಆದೇಶ ಸಂಖ್ಯೆ ಎಲ್ಎಕ್ಯೂ / ಸಿಆರ್ / 319 / 2010-11 ದಿನಾಂಕ 03-02-2011 ಮತ್ತು ಎಲ್ಎಕ್ಯೂ.ಎಸ್.ಆರ್.41/2010-11 ದಿನಾಂಕ 28-02-2011 ರಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಿ 4(1) ರ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಇವು ಕ್ರಮವಾಗಿ ದಿನಾಂಕ 07-03-2011 ಮತ್ತು 09-03-2011 ರಂದು ಕರ್ನಾಟಕ ಭೂಸ್ವಾಧೀನ ಕಾಯ್ದೆ 1894 ಪ್ರಕರಣ 4(1)

ಶುದ್ಧಪ್ರತಿ

ರ ಘೋಷಣೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುವುದರಿಂದ, ಈ ಪ್ರಕರಣದಲ್ಲಿ ಉದ್ದೇಶ ಪೂರ್ವಕವಾಗಿ ಗೌರವಾನ್ವಿತ ನ್ಯಾಯಾಲಯದ ನಿಂದನೆಯಾಗಿಲ್ಲವೆಂಬುದನ್ನು ಮನವರಿಕೆ ಮಾಡಿಕೊಡಲು ಹಾಗೂ ಪ್ರಸ್ತಾವಿತ ಪ್ರದೇಶವು ಸಾರ್ವಜನಿಕ ಉದ್ದೇಶಕ್ಕೆ ಅತ್ಯಾವಶ್ಯಕವಾಗಿ ಬೇಕಾಗಿರುವುದರಿಂದ ಹಾಗೂ ನ್ಯಾಯಾಲಯದ ಎಲ್ಲಾ ಆದೇಶಕ್ಕೆ ಪ್ರಾಧಿಕಾರದ ಸದಸ್ಯರುಗಳು ಹೆಚ್ಚಿನ ಗೌರವ ನೀಡುವ ಸಂಬಂಧ, ಈ ಎಲ್ಲಾ ಮಾಹಿತಿಯನ್ನು ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯದ ಗಮನಕ್ಕೆ ತರಲು ಸಭೆಯು ಬಹುಮತದಿಂದ ತೀರ್ಮಾನಿಸಿತು.

ಸಹಿ/–
ಅಧ್ಯಕ್ಷರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

– ನಕಲು –

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

ಶುದ್ಧಪ್ರತಿ